NOVEMBER 16, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಏಕತೆಯ ನಡಿಗೆ, ದೇಶದ ಏಕತೆ ಮತ್ತು ಸಹೋದರತ್ವದ ಸಂಕೇತವಾಗಿದೆ; 'ಏಕ್ ಭಾರತ್, ಶ್ರೇಷ್ಠ ಭಾರತ್' ಸಂದೇಶವನ್ನು ಸಾರುವ, ಈ ಯಾತ್ರೆ, ನವಯುಗದ ಭಾರತ ನಿರ್ಮಾಣಕ್ಕೆ ಪ್ರೇರಣೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಹೇಳಿದ್ದಾರೆ. ಸರ್ದಾರ್ ವಲ್ಲಭಭಾಯಿ ಪಟೇಲರ, 150ನೇ ಜಯಂತ್ಯುತ್ಸವದ ಹಿನ್ನೆಲೆ, ಕೇಂದ್ರದ ಯುವ ಮತ್ತು ಕ್ರೀಡಾ ಸಚಿವಾಲಯ ಆಯೋಜಿಸಿದ್ದ, ಏಕತಾ ನಡಿಗೆಗೆ, ಧಾರವಾಡ ಜಿಲ್ಲೆ ಹುಬ್ಬಳ್ಳಿಯ, ಕೆ.ಎಲ್.ಇ., ಬಿ.ವಿ.ಭೂಮರೆಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಚಾಲನೆ ನೀಡಿ, ಮಾತನಾಡಿದರು. ಆತ್ಮನಿರ್ಭರ ಭಾರತವನ್ನು ರೂಪಿಸಲು, ಯುವ ಪೀಳಿಗೆಯ ಮೂಲಕ, ರಾಷ್ಟ್ರದ ಒಗ್ಗಟ್ಟಿಗೆ ಶಕ್ತಿ ತುಂಬುವುದು, ಏಕತಾ ನಡಿಗೆಯ ಉದ್ದೇಶವಾಗಿದೆ, ಎಂದರು.**

<><><>

**ಕ್ರಾಂತಿಕಾರಿ, ಭಗವಾನ್ ಬಿರ್ಸಾಮುಂಡ ಅವರ 150 ನೇ ವ ರ್ಷದ ಜಯಂತಿ ಹಿನ್ನೆಲೆ ಜನಜಾತೀಯ ಗೌರವ ದಿವಸ ಹಾಗೂ ಕಾನೂನು ಅರಿವು –ನೆರವು ಕಾರ್ಯಕ್ರಮ ಕೊಪ್ಪಳ ಜಿಲ್ಲೆ, ಗಂಗಾವತಿ ನಗರದ, ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಜರುಗಿತು. ಕೊಪ್ಪಳ ಜಿಲ್ಲೆ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಮಹಾಂತೇಶ ದರಗದ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.**

<><><>

ಕಲಬುರಗಿ ಜಿಲ್ಲೆಯಲ್ಲಿ, ಪ್ರಸಕ್ತ ಸಾಲಿನ, ಮುಂಗಾರು ಹಂಗಾಮಿನಲ್ಲಿ, ಭಾರಿ ಮಳೆ ಹಾಗೂ ಪ್ರವಾಹದಿಂದ ಹಾನಿಯಾದ ಬೆಳೆಗಳಿಗೆ, ರಾಜ್ಯ ಸರ್ಕಾರ ಎಸ್.ಡಿ.ಆರ್.ಎಫ್ ಹಾಗೂ ಎನ್.ಡಿ.ಆರ್.ಎಫ್ ಮಾರ್ಗಸೂಚಿಯನ್ವಯ, 3 ಲಕ್ಷದ 26 ಸಾವಿರ ರೈತರಿಗೆ, 250 ಕೋಟಿ 97 ಸಾವಿರ ರೂಪಾಯಿ, ಪರಿಹಾರ ಮಂಜೂರಾತಿ ನೀಡಿದೆ ಎಂದು ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

ಹುಬ್ಬಳ್ಳಿಯ ರಾಜ ನಗರದ, ಕೆ.ಎಸ್.ಸಿ.ಎ. ಕ್ರೀಡಾಂಗಣದಲ್ಲಿ, ಎಲೈಟ್ 'ಬಿ' ಗುಂಪಿನ, ರಣಜಿ ಟ್ರೋಫಿ ಪಂದ್ಯಾವಳಿ, ಕರ್ನಾಟಕ ಹಾಗೂ ಚಂಡೀಘಡ ತಂಡಗಳ ಮಧ್ಯೆ, ಆರಂಭಗೊಂಡಿದೆ. ಟಾಸ್ ಜಯಿಸಿರುವ ಮಯಾಂಕ ಅಗರ್ವಾಲ್ ನೇತೃತ್ವದ ಕರ್ನಾಟಕ ತಂಡ, ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

ಎಲೈಟ್ ಬಿ ಗುಂಪಿನ ರಣಜಿ ಪಂದ್ಯದ ಕುರಿತು ಮಾಹಿತಿ ನೀಡಿದ್ದಾರೆ, ಬೆಂಗಳೂರಿನ, ಹಿರಿಯ ಕ್ರೀಡಾ ಪತ್ರಕರ್ತ, ಗಿರೀಶ್ ದೊಡ್ಡಮನಿ..

<><><>

ಧ್ವನಿ: ಗಿರೀಶ ದೊಡ್ಡಮನಿ 38 ಸೆಕೆಂದುಗಳು

<><><>

ಇತ್ತೀಚಿನ ವರದಿ ಬಂದಾಗ ಕರ್ನಾಟಕ ತಂಡ, ಮೂರು ವಿಕೆಟ್ ನಷ್ಟಕ್ಕೆ, 74 ರನ್ ಕಲೆ ಹಾಕಿದೆ.

<><><>

ಗದಗ ಜಿಲ್ಲೆಯಾದ್ಯಂತ, ಈ ತಿಂಗಳ 24 ರಿಂದ, ಡಿಸೆಂಬರ್ 9ರ ವರೆಗೆ, ಕುಷ್ಠ ರೋಗ ಪತ್ತೆ ಸಮೀಕ್ಷೆ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ಸಿ.ಎಂ.ಶ್ರೀಧರ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಜಿಲ್ಲಾ ಕುಷ್ಠ ರೋಗ ನಿರ್ಮೂಲನಾಧಿಕಾರಿ, ರಾಜೇಂದ್ರ ಬಸರಿಗಿಡದ ಮಾತನಾಡಿ, ಶಾಲಾ ಮಕ್ಕಳು ಸೇರಿದಂತೆ, ಜಿಲ್ಲೆಯ 120 ಗ್ರಾಮಗಳಲ್ಲಿ, 434 ಸಮೀಕ್ಷಾ ತಂಡಗಳು, ಕುಷ್ಠ ರೋಗ ಪತ್ತೆ ಸಮೀಕ್ಷೆ ಕೈಗೊಳ್ಳಲಿವೆ, ಎಂದರು.

<><><>

ಕೋಲಾರ ಜಿಲ್ಲೆಯ, 150 ಸರ್ಕಾರಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ, 2 ರಿಂದ 5 ಗುಂಟೆ ಜಾಗೆಯಲ್ಲಿ, ಧನ್ವಂತರಿ ವನ ನಿರ್ಮಿಸಲಾಗುತ್ತಿದೆ ಎಂದು, ಜಿಲ್ಲಾಧಿಕಾರಿ ಎಂ.ಆರ್.ರವಿ ತಿಳಿಸಿದ್ದಾರೆ. ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ, ಪೂರ್ವಭಾವಿ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಮಾತನಾಡಿದರು. 'ಪೌಷ್ಟಿಕ ತೋಟ' ಯೋಜನೆಯನ್ನು, ಜಿಲ್ಲೆಯ 150 ಶಾಲೆಗಳು ಹಾಗೂ 45 ವಸತಿ ನಿಲಯಗಳಲ್ಲಿ, ಆಯುರ್ವೇದ ಗಿಡಗಳನ್ನು, 20 ಗುಂಟೆಯಿಂದ ಅರ್ಧ ಎಕರೆ ಪ್ರದೇಶದಲ್ಲಿ, ನೆಟ್ಟು ಪೋಷಿಸಲು ಯೋಜಿಸಲಾಗಿದೆ ಎಂದರು.

<><><>

ಇಂದು, ರಾಷ್ಟ್ರೀಯ ಪತ್ರಿಕಾ ದಿನಾಚರಣೆ. 1966 ರಲ್ಲಿ, ಭಾರತೀಯ ಪತ್ರಿಕಾ ಮಂಡಳಿ, ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ, ಸ್ಥಾಪನೆಯ ಸ್ಮರಣಾರ್ಥ, ಅಭ್ಯುದಯ ಪತ್ರಿಕೋದ್ಯಮ ಎದುರಿಸುತ್ತಿರುವ ಸವಾಲುಗಳನ್ನು ಚರ್ಚಿಸಲು, ಈ ದಿನ ಮೀಸಲಿದೆ.ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ– ಕೆ.ಯು.ಡಬ್ಲ್ಯೂ.ಜೆ ವತಿಯಿಂದ, ಇಂದು ಸಂಜೆ 6 ಗಂಟೆಗೆ ಮಂಡ್ಯದಲ್ಲಿ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ, ಅಂಶಿ ಪ್ರಸನ್ನಕುಮಾರ್ ಅವರು ಉಪನ್ಯಾಸ ನೀಡಲಿದ್ದಾರೆ. ಕೆ.ಯು.ಡಬ್ಲ್ಯೂ.ಜೆ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಪಾಲ್ಗೊಳ್ಳಲಿದ್ದಾರೆ.

<><><>

ಕೊಡಗು ಜಿಲ್ಲೆ, ಮಡಿಕೇರಿ ತಾಲೂಕು, ಗಾಳಿಬೀಡು ಪಂಚಾಯಿತಿ ವ್ಯಾಪ್ತಿಯ, ಕಡಮಕಲ್ ಗ್ರಾಮಕ್ಕೆ, ಮೂಲಸೌಕರ್ಯ ಒದಗಿಸಲು, ಕ್ರಮ ಕೈಗೊಳ್ಳುವಂತೆ, ಶಾಸಕ ಮಂಥರ್‌ಗೌಡ, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಸಾರ್ವಜನಿಕರ ಅಹವಾಲು ಆಲಿಸಿದ ಶಾಸಕರು, ಕಡಮಕಲ್ ಗ್ರಾಮದಲ್ಲಿ ಇನ್ನೂರು ಜನಸಂಖ್ಯೆ ಇದ್ದು, ಸುಳ್ಯ ಮೂಲಕ 80 ಕಿಲೋ ಮೀಟರ್ ಕ್ರಮಿಸಿ, ಮಡಿಕೇರಿಗೆ ಆಗಮಿಸಿ, ಅಲ್ಲಿನ ಜನ ಕೂಲಿ ಮಾಡುತ್ತಿದ್ದಾರೆ ಎಂದು, ತಿಳಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>